# A R M FIRST GRADE COLLEGE

## S N LAY OUT DAVANAGER collboration with

## RED CROSS UNIT 2019-2020

### "NATIONAL VOLUNTARY BLOOD DONATION DAY-2019"

ಜ್ಞಾನ ಜ್ಯೋತಿ
ಶ್ರೀ ದೇವರಾಜ್ ಅರಸ್ ವಿದ್ಯಾಸಂಸ್ಥೆ (ರಿ.) ಚಿತ್ರದುರ್ಗ.

**ಎ. ಆರ್. ಎಂ. ಪ್ರಥಮ ದರ್ಜೆ ಕಾಲೇಜು.**

ಮತ್ತು ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ. ಬೆಂಗಳೂರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. ದಾವಣಗೆರೆ. ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ

**ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ 2019**

ಸ್ಥಳ:- ಕಾಲೇಜು ಸಭಾ ಭವನ ಸಮಯ: ಮಧ್ಯಾಹ್ನ, 10:30 ಗಂಟೆಗೆ ದಿನಾಂಕ:- 19-10-2019

**ಕಾರ್ಯಕ್ರಮದ ಪಟ್ಟಿ**

**ನಿರೂಪಣೆ** : ಪ್ರೊ. ಮೌನೇಶ್ವರ ಟಿ ಎನ್ ಸಹಾಯಕ ಪ್ರಾಧ್ಯಾಪಕರು

**ಪ್ರಾರ್ಥನೆ** : ಕು. ಪ್ರಿಯಾಂಕ ಸಿ

**ಸ್ವಾಗತ** : ಪ್ರೊ. ಮನೋಹರ ಎಸ್ ಬಿ.ಸಹಾಯಕ ಪ್ರಾಧ್ಯಾಪಕರು.

**ಪ್ರಾಸ್ತಾವಿಕ ನುಡಿ** : ಡಾ ಜಿ.ಡಿ ರಾಘವನ್
ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ದಾವಣಗೆರೆ.

**ಅಧ್ಯಕ್ಷತೆ** : ಡಿ. ಹೆಚ್.ಪ್ಯಾಟಿ
ಪ್ರಾಂಶುಪಾಲರು, ಎ. ಆರ್. ಎಂ. ಪ್ರಥಮ ದರ್ಜೆ ಕಾಲೇಜು.ದಾವಣಗೆರೆ.

**ಮುಖ್ಯ ಅತಿಥಿಗಳು** : ಶ್ರೀ ಮಹಾಂತೇಶ ಜಿ. ಬೀಳಗಿ
ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಭವನ, ದಾವಣಗೆರೆ

: ಶ್ರೀಮತಿ ಪದ್ಮ ಬಸವಂತಪ್ಪ
ಮಾನ್ಯ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ದಾವಣಗೆರೆ

: ಡಾ ರಾಘವೇಂದ್ರ ಸ್ವಾಮಿ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ದಾವಣಗೆರೆ

: ಡಾ. ನಾಗರಾಜ್ ಎಲ್
ಜಿಲ್ಲಾ ಶಸ್ತ್ರಚಿಕಿತ್ಸಕರು/ಅಧೀಕ್ಷಕರು, ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ದಾವಣಗೆರೆ

: ಡಾ.ಕೆ ಹೆಚ್ .ಗಂಗಾಧರ
ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳು ಮತ್ತು ಕಾರ್ಯಕ್ರಮಾಧಿಕಾರಿಗಳು. ಜಿಲ್ಲಾ ಹೆಚ್.ಐ.ವಿ/ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ದಾವಣಗೆರೆ

**ಉಪಸ್ಥಿತಿ** : ಪ್ರೊ. ಅಂಜಿನಪ್ಪ ಡಿ. ಸಹಾಯಕ ಪ್ರಾಧ್ಯಾಪಕರು ಹಾಗೂ ಐ ಕ್ಯೂ ಎ ಸಿ.
: ಪ್ರೊ. ಕಾಡಜ್ಜಿ ಶಿವಪ್ಪ ಸಹಾಯಕ ಪ್ರಾಧ್ಯಾಪಕರು&ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿಗಳು.

**ವಂದನಾರ್ಪಣೆ** : ಡಾ ರಾಕೇಶ್ ಬಿ ಸಿ ಸಹಾಯಕ ಪ್ರಾಧ್ಯಾಪಕರು.

*ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರರು,ಹಾಗೂ ಬಿ.ಎ. ಮತ್ತು ಬಿ.ಕಾಂ. ವಿದ್ಯಾರ್ಥಿ/ನಿಯರು, ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ-04*

**ಸರ್ವರಿಗೂ ಸುಸ್ವಾಗತ**

# A.R.M. FIRST GRADE COLLEGE

## S N LAYOUT DAVANAGER

### YOUTH RED CROSS UNIT

**"NATIONAL VOLUNTARY BLOOD DONATION DAY-2019"**
**Colloborotion with**

**Karnataka State AIDS Prevention Society Bangalore,**
**Department of District Healtha and Family welfare Davangere,**
**District AIDS Control Unit Davangere,**

Venue; College Auditorium Time; 10;30 Morning Date: 19-10-2019

**List of Programme**

Anchoring ; Shri. T N Mouneshwara, Assistant Professor

Invocation; :Kum ; Priyanka C

Welcome ; Shri. Manohara S B Assistant Professor
Introductory Speech: Dr. G.D. Raghavan ,District Healthn Officer Davangere.
President :**Shri. D.H. Pyati** Principal, ARM FGC Davangere
Chief Guest :**Shri. Mahanthesh Bilagi, District Commissioner, Davangere**
**: Smt. Padma Basavanthappa** CEO Zilla Panchayath Davangere
: **Dr. Raghavendra swamy**. DHO
: **Dr. Nagaraja L**, Superintendent District Hospital Davangere

:**Dr.K.H.Gangadhara**,DistricLaprocyController, Davangere
**Presence** **:** Shri. **Anjinappa** Assistant Professor
: Shri. **Kadajji Shivappa** Assistant professor
**Vote of thanks** : **Dr. B.C. Rakesh** Assistsnty Professor

**ALL ARE WELCOME**

**Brief Report ;**

- Blood donation camp was organised collaboration with ARM First Grtade College Davangere, Karnataka State AIDS Prevention Society Bangalore, Department of Department of District Healtha and Family welfare Davangere, District AIDS Control Unit Davangere at AR M First Grade Ccllege Davangere.on.

- Voluntary blood donation day celebrated in our college on 19-10-2019.Shri.Shivakumar, has 70 times Volunteer donated and some of the teachers as well as students have blood donated.





**Shri. Mohamed Riyaz,** Librarian of A R M First grade college. has donated blood



**The program is organised in the seminar hall of the college.**

**Students donating blood.**







# Paper cutting of the Blood Donation Programme



ದಾವಣಗೆರೆ

3E ಶುಕ್ರವಾರ • ಅಕ್ಟೋಬರ್ 25, 2019

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್

## ರಕ್ತದಾನ: ತಪ್ಪು ತಿಳಿವಳಿಕೆ ಬೇಡ

ಪ್ರಜಾವಾಣಿ ವಾರ್ತೆ

ದಾವಣಗೆರೆ: ರಕ್ತದಾನದ ಬಗ್ಗ ತಪ್ಪು ಅಭಿಪ್ರಾಯ ಬೇಡ. ವಿದ್ಯಾರ್ಥಿಗಳು ರಕ್ತದಾನ ಕುರಿತು ಮಾಹಿತಿ ಪಡೆದು ಉಳಿದವರಿಗೂ ಹಂಚಬೇಕು ಎಂದು ಜಿಲ್ಲಾ ಆಸ್ಪತ್ರೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್ ಹೇಳಿದರು.

ಇಲ್ಲಿನ ಎ.ಆರ್.ಎಂ. ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ರೆಡ್ ರಿಬ್ಬನ್ ಕ್ಲಬ್, ಎನ್‌ಎಸ್‌ಎಸ್ ಘಟಕಗಳ ಆಶ್ರಯದಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ರಕ್ತದಾನದ ಬಗ್ಗೆ ಹಲವರಲ್ಲಿ ತಪ್ಪು ತಿಳಿವಳಿಕೆ ಇದೆ. ಅದನ್ನು ಹೋಗಲಾಡಿಸಿ ರಕ್ತದಾನದಿಂದ ಆರೋಗ್ಯವಂತರಾಗಿರಬಹುದು ಎಂಬುದನ್ನು ಮನದಟ್ಟು ಮಾಡುವ ಉದ್ದೇಶದಿಂದ ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಿ.ಎಚ್.ಪ್ಯಾಟಿ, 'ರಕ್ತದಾನದಿಂದ ಆರೋಗ್ಯವನ್ನು ಸದೃಢವಾಗಿ ಇಟ್ಟುಕೊಳ್ಳಬಹುದು. ವಿದ್ಯಾರ್ಥಿಗಳು ನಮ್ಮಿಂದ ಏನೂ ಮಾಡಲು ಸಾಧ್ಯವಿಲ್ಲ ಎಂದು ಯೋಚಿಸದೆ ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು. ರಕ್ತದಾನವೂ ಸಮಾಜಸೇವೆ. ಇದಕ್ಕೆ ಹಿಂಜರಿಕೆ ಬೇಡ. ಒತ್ತಡಕ್ಕೆ ಒಳಗಾಗದೆ ಕಾರ್ಯನಿರ್ವಹಿಸಿ' ಎಂದು ಸಲಹೆ ನೀಡಿದರು.

ಹೆಚ್ಚು ಬಾರಿ ರಕ್ತದಾನ ಮಾಡಿದ ಮಂಗಳಾ ಕೆ.ಎಸ್-50 ಬಾರಿ, ನೇತ್ರಾವತಿ ಎಸ್. -46, ಪ್ರತಾಪ್-39 ಬಾರಿ ಅವರನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ರಕ್ತದಾನ ಶಿಬಿರ ನಡೆಯಿತು. ತಾಲ್ಲೂಕು ಆರೋಗ್ಯಾಧಿಕಾರಿ ವೆಂಕಟೇಶ್, ಸಹಾಯಕ ಪ್ರಾಧ್ಯಾಪಕ ಪ್ರೊ. ಅಂಜಿನಪ್ಪ ಡಿ., ಪ್ರೊ. ಕಾಡಜ್ಜಿ ಶಿವಪ್ಪ, ಮೌನೇಶ್, ಶಾಂತಪ್ಪ ಇದ್ದರು. ಪ್ರೊ. ಮೌನೇಶ್ವರ ಟಿ.ಎನ್. ನಿರೂಪಿಸಿದರು. ಪ್ರೊ. ಮನೋಹರ ಎಸ್.ಬಿ. ಸ್ವಾಗತಿಸಿದರು.

**ಮುಖ್ಯಾಂಶಗಳು**

- ಜಿಲ್ಲೆಯಲ್ಲಿ 6 ರಕ್ತನಿಧಿ ಕೇಂದ್ರ
- ಆರೋಗ್ಯವಂತರಲ್ಲಿ 5 ಲೀ. ರಕ್ತ
- ರಕ್ತದಾನದಿಂದ ಕಾಯಿಲೆ ದೂರ

ದಾವಣಗೆರೆಯ ಎ.ಆರ್.ಎಂ. ಕಾಲೇಜಿನಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ ನಡೆಯಿತು

# ರಕ್ತದಾನ ಮಾಡುವುದು ಸಮಾಜಮುಖಿ ಚಟುವಟಿಕೆ– ಡಾ. ಜಿ.ಡಿ ರಾಘವನ್

ನಗರವಾಣಿ
ಅಕ್ಟೋಬರ್ 20, 2019 ಭಾನುವಾರ, ಪುಟ–3



ದಾವಣಗೆರೆ,ಅ.19: ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದರೂ ರಕ್ತದ ಕೃತಕ ಸೃಷ್ಟಿ ಅಸಾಧ್ಯ. ರಕ್ತದಾನದಿಂದ ಹಲವಾರು ಉಪಯೋಗಗಳಿದ್ದು, ಅದೊಂದು ಸಮಾಜಮುಖಿ ಚಟುವಟಿಕೆಯಾಗಿದೆ. ಸುತ್ತಮುತ್ತಲಿನ ಜನರನ್ನು ರಕ್ತದಾನ ಮಾಡುವಂತೆ ಪ್ರೇರೇಪಿಸುವುದು ನಮ್ಮೆಲ್ಲರ ಕರ್ತವ್ಯವೆಂದು ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ ರಾಘವನ್ ಹೇಳಿದರು.

ನಗರದ ಎ.ಆರ್.ಎಂ ಕಾಲೇಜಿನಲ್ಲಿ ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ, ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆಯಲ್ಲಿ ಅವರು ಮಾತನಾಡಿದರು.

1975 ರಿಂದ ರಕ್ತದಾನದ ಪರಿಕಲ್ಪನೆ ಆರಂಭವಾಗಿದ್ದು, ಒಂದು ಯುನಿಟ್ ರಕ್ತದಾನ ಮಾಡುವುದರ ಮೂಲಕ 2 ರಿಂದ 3 ಜನರ ಪ್ರಾಣವನ್ನು ಉಳಿಸಬಹುದು. ಇಡೀ ರಕ್ತವನ್ನು ಬೇರೆ ದೇಹಕ್ಕೆ ವರ್ಗಾವಣೆ ಮಾಡುವ ಬದಲು ರಕ್ತವನ್ನು ವರ್ಗೀಕರಿಸಿ ಅವಶ್ಯಕತೆಗನುಗುಣವಾಗಿ ನೀಡಲಾಗುವುದು. ರಕ್ತದಲ್ಲಿನ ಕೆಂಪು ರಕ್ತಕಣಗಳು ನಾವು ಸೇವಿಸಿದ ಆಹಾರವನ್ನು ಗ್ಲುಕೋಸ್ ಆಗಿ ಪರಿವರ್ತಿಸುವುದು ಹಾಗೂ ಆಮ್ಲಜನಕ ಸರಬರಾಜು ಮಾಡುವ ಕೆಲಸವನ್ನು ಮಾಡುತ್ತವೆ. ದೇಹದ ಅಸ್ಥಿಮಜ್ಜೆಯಿಂದ ಇವು ರಚನೆಯಾಗುತ್ತವೆ. ಬಿಳಿ ರಕ್ತಕಣಗಳು ವೈರಸ್‌ಗಳನ್ನು ತಡೆದು, ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ. ಕಿಣ್ವಗಳು ರಕ್ತ ಸೋರುವುದನ್ನು ತಡೆದು ನಿಲ್ಲಿಸಲು ಸಹಾಯಕಾರಿಯಾಗಿವೆ. ಮಾನವನ ದೇಹಕ್ಕೆ ರಕ್ತವು ಇಷ್ಟೊಂದು ಪ್ರಮುಖವಾಗಿರುವುದರಿಂದ ರಕ್ತದಾನ ಮಾಡಿದರೆ ಉಪಕಾರವಾಗುತ್ತದೆ ಎಂದರು.

18 ವರ್ಷದಿಂದ 60 ವರ್ಷ ವಯಸ್ಸಿನ, 50 ಕೆ.ಜಿ ತೂಕ ಹೊಂದಿದ ಆರೋಗ್ಯವಂತ ವ್ಯಕ್ತಿಯು ರಕ್ತದಾನ ಮಾಡಬಹುದಾಗಿದ್ದು, ಮಹಿಳೆಯರು 6 ತಿಂಗಳಿಗೊಮ್ಮೆ, ಪುರುಷರು 3 ತಿಂಗಳಿಗೊಮ್ಮೆ ರಕ್ತ ಕೊಡಬಹುದು. ರಕ್ತ ನೀಡಿದ 48 ಗಂಟೆ ಒಳಗಾಗಿ ಹೊಸ ರಕ್ತ ವೃದ್ಧಿಯಾಗುವುದರಿಂದ ಸ್ವಯಂ ಪ್ರೇರಿತರಾಗಿ ಆಸ್ಪತ್ರೆಯ ಬ್ಲಡ್ ಬ್ಯಾಂಕ್‌ಗಳಲ್ಲಿ ಹೆಚ್ಚೆಚ್ಚು ರಕ್ತದಾನ ಮಾಡಿ ಜೀವ ಉಳಿಸಿ ಹಾಗೂ ಸಮಾಜದಲ್ಲಿ

(3ನೇ ಪುಟಕ್ಕೆ)

## ರಕ್ತದಾನ ಮಾಡುವುದು ಸಮಾಜಮುಖಿ..

ಬಾಕ್ಸ್: ಎಲ್ಲೆಲ್ಲಿವೆ ಬ್ಲಡ್ ಬ್ಯಾಂಕ್: ಚಿಗಟೇರಿ ಆಸ್ಪತ್ರೆ, ಬಾಪೂಜಿ ಆಸ್ಪತ್ರೆ, ಎಸ್. ಎಸ್ ಆಸ್ಪತ್ರೆ, ಶುಭೋದಯ ಸಂಸ್ಥೆ, ಲೈಫ್‌ಲೈನ್ ಹಾಗೂ ಇಂಡಿಯನ್ ರೆಡ್ ಕ್ರಾಸ್.

(1ನೇ ಪುಟದಿಂದ) ಇದರ ಜಾಗೃತಿ ಮೂಡಿಸಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅತೀ ಹೆಚ್ಚು ರಕ್ತದಾನ ಮಾಡಿದ ಶಿಕ್ಷಕಿ ಮಂಗಳ ಕೆ.ಎಸ್, ಅಡ್ವೋಕೇಟ್ ನೇತ್ರಾವತಿ ಎಸ್, ಪೊಲೀಸ್ ಸಿಬ್ಬಂದಿ ಪ್ರತಾಪ್ ಇವರನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಸ್.ನೇತ್ರಾವತಿ ಮಹಿಳೆಯರೂ ರಕ್ತದಾನ ಮಾಡಬೇಕೆಂಬ ಉದ್ದೇಶದಿಂದ ನಾನು 46 ಬಾರಿ ರಕ್ತದಾನ ಮಾಡಿದ್ದೇನೆ. ರಕ್ತದಾನದಿಂದ ಸ್ತ್ರೀಯರ ಆರೋಗ್ಯಕ್ಕೆ ಯಾವುದೇ ಹಾನಿಯಾಗುವುದಿಲ್ಲ. ಜಂಕ್ ಫುಡ್‌ಗಳಿಂದ ದೂರವಿದ್ದು, ಪೋಷ್ಟಿಕಾಂಶವುಳ್ಳ ಆಹಾರವನ್ನು ಸೇವಿಸಿ. ಮಹಿಳೆಯರು ಕನಿಷ್ಠ ವರ್ಷಕ್ಕೊಮ್ಮೆಯಾದರು ರಕ್ತದಾನ ಮಾಡಬೇಕು ಎಂದು ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಐಕ್ಯೂಎಸಿ ಸಹಾಯಕ ಪ್ರಾಧ್ಯಾಪಕ ಪ್ರೊ.ಡಿ.ಅಂಜಿನಪ್ಪ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಪ್ರೊ.ಕಾಡಜ್ಜೆ ಶಿವಪ್ಪ, ಪ್ರೊ.ಟಿ.ಎನ್.ಮೌನೇಶ್ವರ, ಡಾ.ಬಿ.ಸಿ.ರಾಕೇಶ್, ಸಮಾಜಶಾಸ್ತ್ರ ವಿಭಾಗದ ಅಣ್ಣಯ್ಯ ಎಂ.ಡಿ, ಅರ್ಥಶಾಸ್ತ್ರ ವಿಭಾಗದ ಶಾಂತನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿವರ್ಗ ಹಾಗೂ ಬಿ.ಎ. ಬಿ.ಕಾಂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕು.ಪ್ರಿಯಾಂಕ ಸಿ ಪ್ರಾರ್ಥಿಸಿದರು. ಪ್ರೊ. ಮನೋಹರ ಎಸ್ ಬಿ ಸ್ವಾಗತಿಸಿದರು. ಮೌನೇಶ್ ಟಿ ಕಾರ್ಯಕ್ರಮ ನಿರೂಪಿಸಿದರು. ಡಾ. ರಾಕೇಶ್ ಬಿಸಿ ವಂದಿಸಿದರು.

ಸಂಯುಕ್ತ ಕರ್ನಾಟಕ
20, ಅಕ್ಟೋಬರ್, 2019, ಭಾನುವಾರ
ದಾವಣಗೆರೆ

# ರಕ್ತದಾನಕ್ಕೆ ಪ್ರೇರೇಪಿಸುವ ಕೆಲಸವಾಗಲಿ: ಪ್ರೊ. ಪ್ಯಾಟಿ

ಸಂ.ಕ ಸಮಾಚಾರ ದಾವಣಗೆರೆ

ರಕ್ತದಾನದಿಂದ ಆಗುವ ಪ್ರಯೋಜನ ಮತ್ತು ಅದರ ಮಹತ್ವವನ್ನು ನಾವು, ನೀವಷ್ಟೇ ಅರಿತರೆ ಸಾಲದು, ನೆರಹೊರೆ ಸೇರಿದಂತೆ ಇತರರಿಗೂ ಮಾಹಿತಿ ನೀಡಿ ಸ್ವಯಂ ಪ್ರೇರಿತ ರಕ್ತದಾನಕ್ಕೆ ಪ್ರೇರೆಪಿಸಬೇಕು ಎಂದು ಎ.ಆರ್.ಎಂ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲ ಪ್ರೊ. ಡಿ.ಎಚ್. ಪ್ಯಾಟಿ ತಿಳಿಸಿದರು.

ನಗರದ ಎ.ಆರ್.ಎಂ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ಶನಿವಾರ ಆಯೋಜಿಸಿದ್ದ, ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿ ದೆಸೆಯಿಂದಲೇ ರಕ್ತದಾನದ ಮಹತ್ವ ಅರಿವಾಗಲಿದೆ. ರಕ್ತದಾನ ಮಾಡುವುದ–ರಿಂದ ವಿದ್ಯಾರ್ಥಿಗಳು ಸಮಾಜದಲ್ಲಿ ಶ್ರೇಷ್ಠತೆಯನ್ನು ಹೆಚ್ಚಿಸಿಕೊಳ್ಳಲಿದ್ದಾರೆ. ರಕ್ತದಾನವು ಕೂಡ ಸಮಾಜ ಸೇವೆಯಲ್ಲಿ ಭಾಗಿಯಾದಂತೆ. ಉತ್ತಮ ಶಿಕ್ಷಣದ ಜೊತೆಗೆ ಇಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳ ಜೀವನದ ಯಶಸ್ಸಿಗೆ ಸಹಾಯಕವಾಗಲಿದೆ ಎಂದರು.

ಚೀಗಟೇರಿ ಆಸ್ಪತ್ರೆಯ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್ ಮಾತನಾಡಿದರು. ಜಿಲ್ಲೆಯಲ್ಲಿ ಅತಿ ಹೆಚ್ಚು ಬಾರಿ ರಕ್ತದಾನ ಮಾಡಿದ ಶಿಕ್ಷಕಿ ಕೆ.ಎಸ್. ಮಂಜುಳಾ, ವಕೀಲೆ ನೇತ್ರಾವತಿ ಹಾಗೂ ಪೊಲೀಸ್ ಅಧಿಕಾರಿ ಪ್ರತಾಪ್ ಅವರನ್ನು ಸನ್ಮಾನಿಸಲಾಯಿತು.



ದಾವಣಗೆರೆ ಎಆರ್‌ಎಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ದಿನಾಚರಣೆ ಕಾರ್ಯಕ್ರಮದಲ್ಲಿ ಹೆಚ್ಚು ಬಾರಿ ರಕ್ತದಾನ ಮಾಡಿದ ಶಿಕ್ಷಕಿ ಕೆ.ಎಸ್. ಮಂಜುಳಾ, ವಕೀಲೆ ನೇತ್ರಾವತಿ, ಪೊಲೀಸ್ ಅಧಿಕಾರಿ ಪ್ರತಾಪ್ ಅವರನ್ನು ಸನ್ಮಾನಿಸಲಾಯಿತು.

> ಮಹಿಳೆಯರು ಕೂಡ ಯಾವುದೇ ಭಯವಿಲ್ಲದೇ ರಕ್ತದಾನ ಮಾಡಬಹುದು ಎಂಬ ಉದ್ದೇಶದಿಂದ ರಕ್ತದಾನ ಮಾಡಲು ಪ್ರಾರಂಭಿಸಿ 46 ಬಾರಿ ರಕ್ತದಾನ ಮಾಡಿದ್ದೇನೆ. ರಕ್ತದಾನದಿಂದ ಸ್ತ್ರೀಯರ ಆರೋಗ್ಯಕ್ಕೆ ಯಾವುದೇ ಹಾನಿಯಾದುವುದಿಲ್ಲ. ಮಹಿಳೆಯರು ಕನಿಷ್ಠ ಪಕ್ಷ ವರ್ಷಕ್ಕೊಮ್ಮೆಯಾದರು ರಕ್ತದಾನ ಮಾಡಿದರೆ ಒಳಿತು.
>
> –ಎಸ್.ನೇತ್ರಾವತಿ, ವಕೀಲೆ

ತಾಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಐಕ್ಯೂಎಸಿ ಸಹಾಯಕ ಪ್ರಾಧ್ಯಪಕ ಪ್ರೊ. ಡಿ.ಅಂಜಿನಪ್ಪ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಪ್ರೊ. ಕಾಡಜ್ಜಿ ಶಿವಪ್ಪ, ಪ್ರೊ. ಟಿ.ಎನ್. ಮೌನೇಶ್ವರ, ಡಾ.ಬಿ.ಸಿ. ರಾಕೇಶ್ ಮತ್ತಿತರರಿದ್ದರು. ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ ಮತ್ತು ಎ.ಆರ್.ಎಂ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.


ದಾವಣಗೆರೆ ಕನ್ನಡಿಗ

ಇದು ನಿಮ್ಮ ಅಕ್ಷರ ರೂಪದ ಆತ್ಮೀಯ ಮಿತ್ರ

ಸುದ್ದಿ ಸಂಪಾದಕರು : ಪ್ರಭು

ದಾವಣಗೆರೆ ಕನ್ನಡಿಗ, ಗುರುವಾರ ಏಪ್ರಿಲ್ 02, 2015.

## ಯುವಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬೇಕು : ಡಾ|| ಸುನಂದ

ದಾವಣಗೆರೆ : ಎ.ಆರ್.ಎಂ ಪ್ರಥಮ ದರ್ಜೆ ಕಾಲೇಜು ಎಸ್.ನಿಜಲಿಂಗಪ್ಪ ಬಡಾವಣೆ ಯುವ ರೆಡ್‌ಕ್ರಾಸ್ ಘಟಕ ಮತ್ತು ಡಾ||ಬಿ.ಆರ್. ಅಂಬೇಡ್ಕರ್ ...

Co-ordinator
Internal Quality Assurance Cell (IQAC)
A.R.M. First Grade College,
S.N. Layout, Davanagere-577 004.

A.R.M. First Grade College * S. N. Layout, Davangere-04.

PRINCIPAL
A.R.M. First Grade College
S. Nijalingappa Layout,
DAVANGERE-577004.